೯) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ವೋಲ್ಟೇಜ್‌ನಲ್ಲಿ ವ್ಯತ್ಯಾಸದಿಂದ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರ ಮತ್ತು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸೌಲಭ್ಯವು ಬಹುತೇಕ ಸಂಪೂರ್ಣವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಮನೆ ಬಳಕೆಗೆ ಅಷ್ಟೆ ಅಲ್ಲದೆ ರೈತರು ವ್ಯವಸಾಯಕ್ಕೋಸ್ಕರ ಪಂಪ್‌ಸೆಟ್‌ಗಳಿಗೂ ಹಾಗೂ ಗ್ರಾಮಾಂತರ ಕೈಗಾರಿಕೆಯಾದ ಕಬ್ಬಿನ ಗಾಣಗಳಿಗೂ ಸಹ ವಿದ್ಯುತ್ ಸೌಲಭ್ಯವನ್ನು ಪಡೆದು ಉಪಯೋಗಿಸುತ್ತಾ ಇದ್ದಾರೆ. ಮಂಡ್ಯನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವೋಲ್ಟೇಜ್ ವ್ಯತ್ಯಾಸ ಬಹಳವಾಗಿದ್ದು ಕಡಿಮೆ ವೋಲ್ಟೇಜ್‌ನಿಂದಾಗಿ ಪಂಪ್‌ಸೆಟ್‌ಗಳು ಕಬ್ಬಿನ ಗಾಣಗಳು ವ್ಯವಸ್ಥಿತ ಕ್ರಮದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗೂ ನಗರ ಪ್ರದೇಶದಲ್ಲೂ ಮನೆ ದೀಪಗಳು ಪ್ರಕಾಶವಾನವಾಗಿಲ್ಲದೆ ಸರಿಯಾದ ಬೆಳಕು ದೊರಕುತ್ತಿಲ್ಲ. ಗೃಹೋಪಯೋಗಿ ವಿದ್ಯುತ್ ಉಪಕರಣಗಳು ಸಹಾ ತೊಂದರೆಗೆ ಒಳಗಾಗುತ್ತಾ ಇವೆ. ಈ ವೋಲ್ಟೇಜ್ ವ್ಯತ್ಯಾಸವನ್ನು ಮಂಡ್ಯ ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಸರಿಪಡಿಸಿ ಗ್ರಾಹಕರುಗಳಿಗೆ, ರೈತರಿಗೆ ಪರಿಹಾರ ಕಲ್ಪಿಸಿಕೊಡಬೇಕಾಗಿ ಸನ್ಮಾನ್ಯ ಇಂಧನ ಮಂತ್ರಿಗಳವರನ್ನು ಒತ್ತಾಯ ಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಮಂಡ್ಯ ನಗರ ಮತ್ತು ಸಂತೆ ಮುತ್ತಲಿನ ಹಳ್ಳಿಗಳು– ಈಗ ಮಂಡ್ಯದಲ್ಲಿರುವ ೨x೧೨.೫ ಎಂ.ವಿ.ಎ. ಸಾಮರ್ಥ್ಯದ ೮೬/೧೧ ಪರಿವರ್ತಕವಿರುವ ಸಬ್–ಸ್ಟೇಷನ್‌ನಿಂದ ವಿದ್ಯುತ್ತನ್ನು ಪಡೆಯುತ್ತಿದೆ. ಈ ಸ್ಟೇಷನ್ನಿನ ಪೀಕ್ ಲೋಡ್ ವೇಳೆಯಲ್ಲಿನ ಲೋಡ್ ೧೭.೫ ಮೆಗಾವಾಟ್ಸ್ ಮಾತ್ರ ಆಗಿದೆ. ಮಂಡ್ಯ ಸ್ಟೇಷನ್ನಿಗೆ ಮೈಸೂರಿನ ಹೂಟಗಳ್ಳಿಯ ೨೨೦ ಕೆ.ವಿ. ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿದೆ ಅಲ್ಲದೆ ಪಾಂಡವಪುರ, ಮದ್ದೂರು, ನಾಗಮಂಗಲ ಮತ್ತು ಕೆ.ಆರ್. ಪೇಟೆ ಗಳಲ್ಲಿರುವ ೬೬ ಕೆ.ವಿ ಸ್ಟೇಷನ್‌ಗಳಿಗೂ ಸಹ ಮೈಸೂರಿನ ಹೂಟಗಳ್ಳಿಯಲ್ಲಿರುವ ೨೨೦ ಕೆ.ವಿ. ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿದೆ. ಹೀಗಾಗಿ ಮಂಡ್ಯ ಸ್ಟೇಷನ್ನಿಗೆ ಬರುತ್ತಿರುವ ವಿದ್ಯುತ್ ಲೈನಿನಲ್ಲೇ ಕಡಿಮೆ ವೋಲ್ಟೇಜ್ ಸ್ಥಿತಿ ಇದೆ. ಅಲ್ಲದೆ ಬೇಸಿಗೆಯ ತಿಂಗಳುಗಳಲ್ಲಿ ನೀರಾವರಿ ಪಂಪು ಸೆಟ್ಟುಗಳು ಹಾಗೂ ಕಬ್ಬಿನ ಗಾಣಗಳಿಂದ ವಿಕ್ಷಕಾಲದಲ್ಲಿ ತೀವ್ರವಾಗಿ ವಿದ್ಯುತ್ ಬೇಡಿಕೆ ಇರುತ್ತದೆ. ಇದರಿಂದಲೂ ಸಹ ಕಡಿಮೆ ವೋಲ್ಟೇಜ್ ಸ್ಥಿತಿ ಉಂಟಾಗುತ್ತದೆ.

ಮಂಡ್ಯ ಮತ್ತು ಅದರ ಸುತ್ತ ಮುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ಗುಣಮಟ್ಟವನ್ನು ಸುಧಾರಿಸಲು ಕೆಳಕಂಡ ಪರಿಹಾರ ಕ್ರಮಗಳನ್ನು ಉದ್ದೇಶಿಸಿದೆ.

೧) ೧೯೯೦–೯೧ನೇ ಸಾಲಿನಲ್ಲಿ ಟಿ.ಕೆ. ಹಳ್ಳಿಯಲ್ಲಿ (ಮಳವಳ್ಳಿ ತಾಲ್ಲೂಕು) ಒಂದು ೨೨೦ ಕೆ.ವಿ. ಸಬ್–ಸ್ಟೇಷನ್ನನ್ನು ವಿಶ್ವಬ್ಯಾಂಕಿನ ನೆರವಿನಿಂದ ಸ್ಥಾಪಿಸಲು ಉದ್ದೇಶಿಸಲಾಗಿದ್ದು ಕೆಲಸ ಕಾರ್ಯಗಳು ಈಗಾಗಲೇ ಪ್ರಾರಂಭವಾಗಿವೆ. ಈ ಸ್ಟೇಷನ್ ಸ್ಥಾಪನೆಯಾದ ನಂತರ ಮಳವಳ್ಳಿ, ಮಂಡ್ಯ, ಮದ್ದೂರು ಮತ್ತು ನಾಗಮಂಗಲ ಸ್ಟೇಷನ್‌ಗಳನ್ನು ಹಾಲಿ ಇರುವ ಹೂಟಗಳ್ಳಿಯ ಸ್ಟೇಷನ್‌ನಿಂದ ಬೇರ್ಪಡಿಸಿ, ಟಿ ಕೆ. ಹಳ್ಳಿಯ ಸ್ಟೇಷನ್‌ನಿಂದ ವಿದ್ಯುತ್ ಸರಬರಾಜು ಮಾಡಲಾಗುವುದು. ಇದರಿಂದ, ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲಗಳಲ್ಲಿ ವೋಲ್ಟೇಜಿನ ಸ್ಥಿತಿ ಉತ್ತಮಗೊಳ್ಳುವುದು.

೨) ಗ್ರಾಮಾಂತರ ಪ್ರದೇಶಗಳಲ್ಲಿ ೧೧ ಕೆ.ವಿ. ಫೀಡರ್‌ಗಳಿಗೆ ಕೆಪ್ಯಾಸಿಟರ್‌ಗಳನ್ನು ಅಳವಡಿಸಿ ೧೧ ಕೆ.ವಿ. ಲೈನುಗಳ ವೋಲ್ಟೇಜ್ ಸ್ಥಿತಿಯನ್ನು ಉತ್ತಮ ಪಡಿಸಲು ಉದ್ದೇಶಿಸಲಾಗಿದೆ.

೩) ಎಕ್ಸ್‌ಪ್ರೆಸ್ ಲೈನುಗಳನ್ನು ಹಾಕುವುದು, ಹೆಚ್ಚುವರಿ ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್ ಗಳನ್ನು ಲೋಡ್ ಸೆಂಟರ್‌ಗಳಲ್ಲಿ ಹಾಕುವುದು, ಹಾಲಿ ಇರುವ ಕಂಡಕ್ಟರ್‌ಗಳನ್ನು ಬಲಪಡಿಸುವುದು ಇತ್ಯಾದಿ ವ್ಯವಸ್ಥೆ ಸುಧಾರಣಾ ಕ್ರಮಗಳನ್ನು ಉದ್ದೇಶಿಸಿದೆ.